

ಮೆಗಲಾನಿಕ್ ಮೋಡಗಳಲ್ಲಿ ಒಂದಾದ ದೊಡ್ಡ ಮೆಗಲಾನಿಕ್ ಮೋಡ
ಚಿತ್ರಕೃಪೆ: ನಾಸಾ



ಕಂಕಾರ್ಡ್ ಪ್ರಯಾಣಿಕರ ವಿಮಾನ
ಚಿತ್ರಕೃಪೆ: ವಿಕಿಮೀಡಿಯಾ




ಮೆಗಲಾನನಿಗೆ 'ಸ್ವಲ್ಪ ಅಂತರವಿರುವ ಎರಡು ಮೋಡಗಳಂತೆ ಗೋಚರಿಸುವ ನಕ್ಷತ್ರಗಳ ದಟ್ಟವಾದ ಗುಂಪು ಹಾಗೂ ಅದರಲ್ಲಿನ ಎರಡು ಪ್ರಖರವಾದ ನಕ್ಷತ್ರಗಳಂತಹ ಸ್ವರೂಪಗಳು' ಆಗಸದಲ್ಲಿ ಗೋಚರಿಸಿದವು. ಇಂದು ನಾವು ತಿಳಿದಿರುವಂತೆ ಅವು ನಮ್ಮ ಗ್ಯಾಲಕ್ಸಿಯಾದ 'ಆಕಾಶಗಂಗೆ' ಯ ಸಮೀಪದಲ್ಲಿನ ಆ ಎರಡು ಕುಬ್ಜ ಉಪಗ್ರಹ ಗ್ಯಾಲಕ್ಸಿಗಳು. ಅವುಗಳಿಗೆ 'ಮೆಗಲಾನಿಕ್ ಮೋಡಗಳು' ಎಂಬ ಹೆಸರನ್ನು ನೀಡಲಾಗಿದೆ.

ಶಾಂತಸಾಗರದಲ್ಲಿ ಪಶ್ಚಿಮಾಭಿಮುಖವಾಗಿ ಸಾಗುವ ಮೂಲಕ ಮೂರ್ನಾಲ್ಕು ದಿನಗಳಲ್ಲಿ ಯಥೇಚ್ಛವಾಗಿ ಸಾಂಬಾರ ಪದಾರ್ಥಗಳನ್ನು ಉಳ್ಳ ಮೊಲುಕ್ಕಾಸ್ ದ್ವೀಪಗಳನ್ನು ತೆರಳಬಹುದೆಂದು ಮೆಗೆಲಾನ್ ಅಂದುಕೊಂಡ. ಅದು ಅವನು ಮಾಡಿದ ಎರಡನೇ ದೊಡ್ಡ ತಪ್ಪಾಯಿತು.

ಏಕೆಂದರೆ ತನಗಿಂತ ಸುಮಾರು ಸಾವಿರದ ನಾನ್ನೂರು ವರ್ಷಗಳ ಹಿಂದೆ ಜೀವಿಸಿದ್ದ ಟಾಲೆಮಿ ಎಂಬ ಪ್ರಾಚೀನ ಖಗೋಲಶಾಸ್ತ್ರಜ್ಞ ಭೂಮಿಯ ಸುತ್ತಳತೆ (ಸರ್ಕಂಫರೆನ್ಸ್) ಸುಮಾರು 29 ಸಾವಿರ ಕಿಲೋಮೀಟರ್ ಎಂದು ಹೇಳಿದ್ದನ್ನು ಮೆಗಲಾನ್ ಆಧಾರವಾಗಿಟ್ಟುಕೊಂಡು ತನ್ನ ಯಾನವನ್ನು ಆರಂಭಿಸಿದ್ದ. ಆದರೆ ಭೂಮಿಯ ಸುತ್ತಳತೆ 40 ಸಾವಿರ ಕಿಲೋಮೀಟರ್‌ನಷ್ಟಿದೆ. ಆ ಎರಡು ಸಂಖ್ಯೆಗಳಲ್ಲಿನ ಅಂತರವನ್ನು ಇಂದು ಸಾಗರಗಳಲ್ಲೇ ಅತ್ಯಂತ ದೊಡ್ಡದು ಎಂಬ ಖ್ಯಾತಿಯನ್ನು ಪಡೆದಿರುವ ಶಾಂತಸಾಗರ ತುಂಬುತ್ತದೆ.

## ಸಂಕಷ್ಟಗಳ ಸರಮಾಲೆ

ಶಾಂತಸಾಗರದ ವೈಶಾಲ್ಯವನ್ನು ಅರಿಯದ ಮೆಗಲಾನ್ ಅದರಲ್ಲಿ ಪಶ್ಚಿಮದೆಡೆಗೆ ಸಾಗಿದಂತೆ ಅವನಿಗೆ ಮೊಲುಕ್ಕಾ ದ್ವೀಪಗಳಿರಲಿ, ಯಾವ ಭೂಭಾಗವೂ ಮೂರು ತಿಂಗಳುಗಳಷ್ಟು ದೀರ್ಘಕಾಲ ಬಹುಮಟ್ಟಿಗೆ ಗೋಚರಿಸಲಿಲ್ಲ. ಇದರಿಂದ ಆಹಾರ ಹಾಗೂ ನೀರಿನ ದಾಸ್ತಾನು ಮುಗಿದು ನಾವಿಕರು ಹಸಿವು ಬಾಯಾರಿಕೆಗಳಿಂದ ತತ್ತರಿಸುವಂತಾಯಿತು.

ಆ ಸನ್ನಿವೇಶದಲ್ಲಿ ಅವರು ಹಡಗಿನ ಮರದ ಪುಡಿಯನ್ನು, ಹಡಗಿನಲ್ಲಿ ಅಡಗಿದ್ದ ಇಲಿಗಳ ಮೂತ್ರದಿಂದ ಕಲುಷಿತವಾದ ಬಿಸ್ಕತ್ತುಗಳನ್ನು, ಎತ್ತಿನ ಒಣ ಚರ್ಮವನ್ನು, ಇಲಿಗಳನ್ನು ಅನಿವಾರ್ಯವಾಗಿ ತಿಂದು ಜೀವ ಉಳಿಸಿಕೊಳ್ಳಲು ಪ್ರಯತ್ನಿಸಿದರು. ಕುಡಿಯುವ ನೀರಿನಲ್ಲಿ ಹುಳಗಳು ಬಿದ್ದಿದ್ದರೂ ಅದನ್ನೇ ಅವರು ಕುಡಿಯಬೇಕಾಯಿತು. ವಿಟಮಿನ್ 'ಸಿ'ಯ ಅಭಾವದಿಂದಾಗಿ ಅವರಿಗೆ ಸ್ಕರ್ವಿ ಎಂಬ ಕಾಯಿಲೆಯೂ ಅಂಟಿಕೊಂಡಿತು. ಸಾವು ಒಬ್ಬೊಬ್ಬರನ್ನಾಗಿ ಆಹುತಿ ತೆಗೆದುಕೊಳ್ಳಲಾರಂಭಿಸಿತು.

ಇದರಿಂದಲೂ ಎದೆಗುಂದದ ಮೆಗಲಾನ್ ತನ್ನ ಪಯಣವನ್ನು ಮುಂದುವರೆಸಿದ. ಕೊನೆಗೆ ಶಾಂತ ಸಾಗರವನ್ನು ಪ್ರವೇಶಿಸಿದ ಸುಮಾರು ನೂರು ದಿನಗಳ ನಂತರ, ಇಂದು ಗ್ವಾಮ್ ಎಂದು ಕರೆಯಲಾಗುವ ದ್ವೀಪವನ್ನು ಸೇರಿದ. ಅಲ್ಲಿ ಆಹಾರ ಹಾಗೂ ನೀರುಗಳ ದಾಸ್ತಾನನ್ನು ಮಾಡಿಕೊಂಡ.

ಆ ಬಳಿಕ ನೈರುತ್ಯ (ಸೌತ್ ವೆಸ್ಟ್) ದಿಕ್ಕಿನಲ್ಲಿ ಒಂದು ವಾರದ ಪಯಣದ ನಂತರ ಇಂದು ಫಿಲಿಪ್ಪೀನ್ಸ್ ಎಂದು ಕರೆಯಲಾಗುವ ದ್ವೀಪರಾಷ್ಟ್ರದ ನೆಲ ಅವನಿಗೆ ಗೋಚರಿಸಿತು.

ಅಲ್ಲಿನ ಒಂದು ದ್ವೀಪದಲ್ಲಿ ಲಂಗರು ಹಾಕಿದ ಮೆಗಲಾನ್ ಕೆಲಕಾಲದ ನಂತರ ತನ್ನಲ್ಲಿದ್ದ ಫಿರಂಗಿಗಳ ಸಾಮರ್ಥ್ಯವನ್ನು ಸೆಬು ಎಂಬ ಮತ್ತೊಂದು ದ್ವೀಪದ ಅಧಿಪತಿಯಾದ ರಾಜಾ ಹುಮಬಾನ್‌ನಿಗೆ ಪ್ರದರ್ಶಿಸಿದ. ಆದರೆ ಆ ರಾಜನೇನೂ ಮೆಗಲಾನನನ್ನು ವೈರಿಯಂತೆ ನೋಡಲಿಲ್ಲ. ಅಲ್ಲಿ ತಂಗಿದ ಮೆಗಲಾನ್, ಅಲ್ಲಿನ ಜನರನ್ನು ಕೆಥೋಲಿಕ್ ಪಂಥದ ಕ್ರೈಸ್ತ ಧರ್ಮಕ್ಕೆ ಮತಾಂತರ ಮಾಡುವಲ್ಲಿ ಸಫಲನಾದ.

## ಮೆಗಲಾನನ ವಿಷಾದಕರ ಅಂತ್ಯ

ಹತ್ತಿರದ ಮಾಕ್ಟಾನ್ ದ್ವೀಪದ ಒಡೆಯನಾದ ಲಾಪು ಲಾಪು, ಮೆಗಲಾನನನ್ನು ವಿರೋಧಿಸಿದ. ಮತಾಂತರ ಹೊಂದಲು ಒಪ್ಪದ ಅವನನ್ನು ಸದೆ ಬಡೆಯಲು ಮೆಗಲಾನ್ ಸುಮಾರು 60 ಶಸ್ತ್ರಸಜ್ಜಿತ ಜನರೊಡನೆ ಹೊರಟ. ಆ ಕಾದಾಟದಲ್ಲಿ ಲಾಪು ಲಾಪು ಕಡೆಯ ಸುಮಾರು 1500ರಿಂದ 3000 ಜನ ಬಂಬುಗಳ ಭರ್ಜಿ, ಕತ್ತಿ, ಮೊದಲಾದ ಆಯುಧಗಳೊಂದಿಗೆ ಮೆಗಲಾನನ ಗುಂಪಿನ ಮೇಲೆ ಮುಗಿಬಿದ್ದರು.

ದೊಡ್ಡ ಸಂಖ್ಯೆಯ ಶತ್ರುಗಳ ಒತ್ತಡದೊಂದಿಗೆ ಮೆಗಲಾನನ ಆಧುನಿಕ ಫಿರಂಗಿಗಳ ಸಾಮರ್ಥ್ಯವನ್ನು ಪ್ರಕೃತಿ ಕುಗ್ಗಿಸಿತು. ಅವನ ಕಡೆಯ ಜನರಲ್ಲಿ ಅನೇಕರು ಹಿಮ್ಮೆಟ್ಟಿ ತಪ್ಪಿಸಿಕೊಳ್ಳುವ ಮೂಲಕ ಜೀವವುಳಿಸಿಕೊಂಡರು. ವೀರಾವೇಶದಿಂದ ಹೋರಾಡುತ್ತಿದ್ದ ಮೆಗಲಾನ್‌ನನ್ನು ಲಾಪು ಲಾಪು ಪಡೆ ಕೊಚ್ಚಿಹಾಕಿತು. ಅಲ್ಲಿಗೆ ಪಶ್ಚಿಮಾಭಿಮುಖವಾಗಿ ಹೊರಟು ಮೊಲುಕ್ಕಾ ದ್ವೀಪಗಳನ್ನು ತಲುಪುವ ಮಹಾನ್ ನಾವಿಕ ಮೆಗಲಾನನ ಕನಸು ನನಸಾಗುವುದಕ್ಕೆ ಸ್ವಲ್ಪ ಮುಂಚೆ ಅವನೊಂದಿಗೇ ಭಗ್ನವಾಯಿತು.

ಜೀವವುಳಿಸಿಕೊಂಡು ಹಿಮ್ಮೆಟ್ಟಿದ ನಾವಿಕರ ಪರಿಸ್ಥಿತಿಯೂ ಉತ್ತಮವಾಗಿರಲಿಲ್ಲ. ಮೊದಲು ಸ್ನೇಹದಿಂದಿದ್ದ ರಾಜಾ ಹುಮಬಾನ್ ಸಹ ಅವರನ್ನು ಸಂದೇಹಿಸಿ ವಿಷವುಣಿಸಲು ಯತ್ನಿಸಿದ. ಅಲ್ಲಿಂದಲೂ ಕಾಲುಕಿತ್ತ ಮೆಗಲಾನನ ನಾವಿಕರು ತಮ್ಮ ಪಯಣವನ್ನು ಮುಂದುವರೆಸಿದರು.

ಹೆಚ್ಚು ನಾವಿಕರಿಲ್ಲದ ಕಾರಣ ತಮ್ಮಲ್ಲಿದ್ದ ಮೂರು ಹಡಗುಗಳ ಪೈಕಿ ಕೊನ್ಸೆಪ್ಸಿಯೋನ್ ಹಡಗನ್ನು ನಾಶಮಾಡಿದ ಮೇಲೆ ಟ್ರಿನಿಡಾಡ್ ಮತ್ತು ವಿಕ್ಟೋರಿಯಾ ಹಡಗುಗಳು ಐದು ತಿಂಗಳುಗಳ ಕಾಲ ಅಲ್ಲಲ್ಲಿ ಸುತ್ತಾಡಿದ ನಂತರ, 1521ರ ನವೆಂಬರ್ 8ರಂದು ಮೊಲುಕ್ಕಾ ದ್ವೀಪವನ್ನು ತಲುಪಿ, ಅಲ್ಲಿ ಸಾಂಬಾರ ಪದಾರ್ಥಗಳನ್ನು ಯಥೇಚ್ಛವಾಗಿ ತುಂಬಿಸಿಕೊಂಡವು.

## ನವ ನಾಯಕ ಎಲ್ ಕಾನೋ

ಆ ಹೊತ್ತಿಗಾಗಲೇ ಮೊದಲಿಗೆ ಮೆಗಲಾನನ